330 ಶ್ರೀ ಖಾದರ್ ಯು.ಟಿ (ಮಂಗಳೂರು)

ಜೆ. ಕೃಷ್ಣ ಪಾಲೇಮಾರ್(ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) ಮಂಗಳೂರು (ದಕ್ಷಿಣ ಕನ್ನಡ) ಬಂದರಿನಲ್ಲಿ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಹೌದು

ಆ) ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ? ಇದಕ್ಕಾಗಿ ಖರ್ಚು ಮಾಡಲಾದ ಹಣವೆಷ್ಟು?

ಮಂಗಳೂರು (ದಕ್ಷಿಣ ಕನ್ನಡ) ಮೀನುಗಾರಿಕಾ ಬಂದರಿನಲ್ಲಿ ಹೂಳೆತ್ತುವ ಬಗ್ಗೆ ರೂ. 185.00 ಲಕ್ಷಗಳ ಅಂದಾಜು ಪಟ್ಟಿಗೆ ಮಂಜೂರಾತಿ ನೀಡಲಾಗಿದೆ. ಕಾಮಗಾರಿ ಪ್ರಾರಂಭಿಸಲಾಗಿದ್ದು ಪ್ರಸ್ತುತ ಮುಕ್ತಾಯದ ಹಂತದಲ್ಲಿದೆ. ಈವರೆಗೆ ರೂ. 108.80 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

166 ಶ್ರೀ ಕಿಮ್ಮನೆ ರತ್ನಾಕರ್

ಪಿ.ಎಂ.ನರೇಂದ್ರಸ್ವಾಮಿ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದ ಪ್ರತಿಯೊಂದು ಹೋಬಳಿಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು;

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದ ಪ್ರತಿಯೊಂದು ಹೋಬಳಿಯಲ್ಲಿರುವ ಅಂಗನವಾಡಿ ಕೇಂದ್ರಗಳ ವಿವರ ಈ ಕೆಳಕಂಡಂತಿದೆ:-

ಹೋಬಳಿ ಹೆಸರು	ಕೇಂದ್ರಗಳ ಸಂಖ್ಯೆ
ಮಂಡಗದ್ದೆ	50
ಕೋಣಂದೂರು	54
ಆಗುಂಬೆ	40
ಕಸಬಾ ತೀರ್ಥಹಳ್ಳಿ	60
ಮತ್ತೂರು	42
ಕೆರೆಹಳ್ಳಿ	7
ಹೊಸನಗರ	53
ಉಂಚ	44
ನಿಧಿಗೆ	31
ಒಟ್ಟು	**381**

ಆ) ಅವುಗಳಲ್ಲಿ ಹೋಬಳಿವಾರು ಬಾಡಿಗೆ ಕಟ್ಟಡ ಅಥವಾ ಇಲಾಖೆಯ ಹೊರತಾದ ಕಟ್ಟಡಗಳು ಎಷ್ಟು;

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಕೋಣಂದೂರು-1, ಹೊಸನಗರ-3, ಉಂಚ-1 ಒಟ್ಟು 5 ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ.

ಇಲಾಖೆ ಹೊರತಾದ ಕಟ್ಟಡಗಳು: ಒಟ್ಟು 124 ಕಟ್ಟಡಗಳು ಮಂಡಗದ್ದೆ-17, ಕೋಣಂದೂರು-17, ಆಗುಂಬೆ-11, ತೀರ್ಥಹಳ್ಳಿ-25, ಮತ್ತೂರು-14, ಹೊಸನಗರ-12, ಉಂಚ-17, ನಿಧಿಗೆ-11

ಇ) ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳ ಕೊರತೆ ಹೋಬಳಿವಾರು ಎಷ್ಟು; ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ತುರ್ತು ಕ್ರಮಗಳೇನು?

ಸ್ವಂತ ಕಟ್ಟಡ ಕೊರತೆಯಿರುವ ಕಟ್ಟಡಗಳ ವಿವರ ಕೆಳಕಂಡಂತಿದೆ:-

ಹೋಬಳಿ ಹೆಸರು	ಕೇಂದ್ರಗಳ ಸಂಖ್ಯೆ
ಮಂಡಗದ್ದೆ	17
ಕೋಣಂದೂರು	18
ಆಗುಂಬೆ	11
ಕಸಬಾ ತೀರ್ಥಹಳ್ಳಿ	25
ಮತ್ತೂರು	14
ಕೆರೆಹಳ್ಳಿ	0
ಹೊಸನಗರ	15
ಉಂಚ	18
ನಿಧಿಗೆ	11
ಒಟ್ಟು	**129**

129 ಕಟ್ಟಡಗಳ ಕೊರತೆಯಿದ್ದು 39 ಕಟ್ಟಡಗಳು ವಿವಿಧ ಯೋಜನೆಗಳಲ್ಲಿ ನಿರ್ಮಾಣ ಆಗುತ್ತಿದೆ. ಉಳಿದ ಕೇಂದ್ರಗಳಿಗೆ ಕಟ್ಟಡಗಳನ್ನು ಅನುದಾನ ಮತ್ತು ನಿವೇಶನ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ನಿರ್ಮಿಸಲಾಗುವುದು.

297 ಶ್ರೀ ಕುಮಾರಸ್ವಾಮಿ ಕೆ.ಜಿ.

ಅ. ರಾಜ್ಯದಲ್ಲಿನ ಕೆಸಿಸಿ ಬ್ಯಾಂಕುಗಳು ಸೇರಿದಂತೆ ಇತರೆ ಡಿಸಿಸಿ ಬ್ಯಾಂಕುಗಳ ಶಾಖೆಗಳನ್ನು ತೆರೆಯಲು ಯಾವ ನಿಯಮಗಳಡಿ ಅವಕಾಶ ನೀಡಲಾಗಿದೆ?

ಯಾವುದೇ ಡಿಸಿಸಿ ಬ್ಯಾಂಕು ತನ್ನ ಶಾಖೆಗಳನ್ನು ಬ್ಯಾಂಕಿನ ಕಾರ್ಯವ್ಯಾಪ್ತಿ ಪ್ರದೇಶದಲ್ಲಿ ತೆರೆಯಲು ಉದ್ದೇಶಿಸಿದಲ್ಲಿ ಆ ಸ್ಥಳದ ಸರ್ವೆ ರಿಪೋರ್ಟ್/ ಸಾಧ್ಯತಾ ವರದಿಯ ಆಧಾರದ ಮೇಲೆ ಆಡಳಿತ ಮಂಡಳಿಯ ಅನುಮೋದನೆಯೊಂದಿಗೆ